ಎರಡನೇ ಕೆಲಸವೆಂದರೆ ದಿನದಲ್ಲಿ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಮಾತ್ರ ಇರಬೇಕು, ಸಂಜೆ ಇರಲೇ ಬಾರದು ಎಂದು ಬರೆದುಕೊಡ. ಸಂಜೆಯಾದೊಡನೆ ಮಾವ ಕಿವಿ ಹಿಂಡಿ ಬಾಯಿಪಾಠ ಮಾಡಿಸಿ ಗೋಳುಹೊಯ್ಯುತ್ತಿದ್ದ. ಸಂಜೆಯೇ ಆಗದಿದ್ದರೆ ಬಾಯಿಪಾಠವೂ ಖೈದು ಎಂಬ ಮಧುರ ಯೋಚನೆ ಅವನನ್ನು ಗಾಳಿಯಲ್ಲಿ ತೇಲಾಡಿಸಿತು.

ಹಳೇ ಮನೆ ಮಾವಿನ ಮರ ವರ್ಷವಿಡೀ ಹಣ್ಣು ಬಿಡುವಂತೆ ಅಲ್ಲಾವುದ್ದೀನ ಮಾಡಬೇಕು ಎಂದು ಅವನಿಂದ ಮಾಡಿಸಬೇಕಾದ ಮೂರನೇ ಕೆಲಸವನ್ನು ಬರೆದ. ಅಷ್ಟರಲ್ಲಿ ಅವನಿಗೆ ಪ್ರಣತಿಯ ನೆನಪಾಯಿತು. ಇತ್ತೀಚೆಗೆ ಅವಳ ಹಾಲುಹಲ್ಲುಗಳು ಒಂದೊಂದಾಗಿ ಉದುರಿದ್ದವು. ಅವು ಬೇಗನೇ ವಾಪಾಸ್ ಬಂದು ಅವಳು ಮುಂಚಿನಂತೆ ಅರ್ಧ ಕಚ್ಚಿದ ಪೇರಳೆ ಹಣ್ಣನ್ನು ತನಗೆ ಕೊಡುವಂತಾಗಬೇಕು ಎಂದು ಬರೆದ.

ಇನ್ನೊಂದು ಸೀರಿಯಸ್ ಆದ ಆಗಲೇ ಬೇಕಾದ ವಿಚಾರವೆಂದರೆ ಅಜ್ಜಿಗೆ ಬೇರೆ ತಿಂಡಿ ಮಾಡುವುದೆಲ್ಲ ಮರೆತು ಹೋಗಿ ದಿನಾ ತಿಂಡಿಗೆ ಬರೀ ಸಿಹಿಪೂರಿ ಮಾತ್ರ ಮಾಡುವಂತೆ ಬುದ್ಧಿ ಕೊಡುವುದು, ಅದು ಅಲ್ಲಾವುದ್ದೀನನ ಐದನೇ ಕೆಲಸವಾಗಿ ನಮೂದಾಯಿತು.

ರಾತ್ರಿ ತನಗೆ ಲೇಟಾಗಿ ನಿದ್ದೆ ಬರಬೇಕು, ಇದರಿಂದ ತಾನೂ ಅಡಕೆ ಸುಲಿಯುವವರ ಜೊತೆ ತಿಂಡಿ ಚಾ ಮೆಲ್ಲಬಹುದು ಎಂಬ ಅಂದಾಜಿನಲ್ಲಿ ಈ ಎರಡು ಕೆಲಸಗಳನ್ನು ಸೇರಿಸಿದ.

ಇತ್ತೀಚೆಗೆ ಕಳೆದು ಹೋಗಿದ್ದ ಐದು ಗೋಲಿಗಳನ್ನು, ಪ್ರಣತಿಯ ಬೊಂಬೆಯನ್ನು ಅಲ್ಲಾವುದ್ದೀನ ಹುಡುಕಿ ಕೊಡಬೇಕು. ಅಜ್ಜಿ ಆಗಾಗ ಬರೆ ಇಡುತ್ತೇನೆ ಎಂದು ಹೆದರಿಸುವ ಆ ದೋಸೆ ಸಟ್ಟುಗ ಕಳೆದು ಹಾಕಬೇಕು ಎಂಬ ಎರಡು ಸಮಸ್ಯೆಗಳನ್ನು ಪಟ್ಟಿಗೆ ಸೇರಿಸಿದ. ಎಲ್ಲ ಕೆಲಸಗಳನ್ನು ಮೊದಲಿನಿಂದ ಕೊನೆಯವರೆಗೆ ಮತ್ತೊಮ್ಮೆ ಓದಿ ಪ್ರಣವ ಎಲ್ಲ ಸರಿಯಾಗಿದೆ ಎಂಬ ನಿರ್ಧಾರಕ್ಕೆ ಬಂದ.

ಅಲ್ಲಾವುದ್ದೀನನ ವಿಷಯವನ್ನು ಪ್ರಣತಿಗೆ ತೋರಿಸಬೇಕೇ ಬೇಡವೇ ಎಂಬ ಗೊಂದಲವೊಂದು ಪ್ರಾರಂಭವಾಯಿತು. ಪ್ರಣತಿ ಎಲ್ಲಿಯಾದರೂ ಅಜ್ಜಿಗೆ ಹೇಳಿಬಿಟ್ಟರೆ ಎಂದು ದಿಗಿಲಾಯಿತು. ಅವಳಿಗೆ ಹೇಳದಿರುವುದೇ ಒಳ್ಳೆಯದು ಎಂಬ ನಿರ್ಧಾರವೇ ಅಂತಿಮವಾಯಿತು.

ಕಥೆಯನ್ನು ನೆನಪು ಮಾಡಿಕೊಳ್ಳುತ್ತ ಒಂದು ದೀಪವನ್ನೆತ್ತಿಕೊಂಡು ಕಣ್ಮುಚ್ಚಿ ಉಜ್ಜತೊಡಗಿದ. ಅಷ್ಟರಲ್ಲಿ ಮಾವ ಪೇಟೆಗೆ ಹೋಗಿ ಬರುವುದಾಗಿ ಅಜ್ಜಿಗೆ ಹೇಳುತ್ತಿದ್ದುದು ಕೇಳಿಸಿತು. ತರಲೆ ಅಜ್ಜಿ 'ಆ ಪ್ರಣವನನ್ನೂ ಕರೆದುಕೊಂಡು ಹೋಗು, ಅವನಿಗೆ ಏಳನೇ ವರ್ಷದ ಇಂಜೆಕ್ಷನ್ ಇತ್ತಂತೆ' ಎಂದಾಗ ಪ್ರಣವನಿಗೆ ಉಸಿರೇ ನಿಂತಂತಾಯ್ತು. ತಾನಲ್ಲಿಗೆ ಹೋದಾಗ ಅಲ್ಲಾವುದ್ದೀನ ಏನಾದರೂ ಬಂದು ಬಿಟ್ಟರೆ ಎಂಬ ಹೊಸ ಸಮಸ್ಯೆಯೂ ಹುಟ್ಟಿಕೊಂಡಿತು. ಆಗ ಮಾವ ಪ್ರಣವಾ.. ಎಂದು ಕೂಗುತ್ತ ಹಿತ್ತಲ ಕಡೆ ಬರುತ್ತಿದ್ದುದನ್ನು ಗಮನಿಸಿ ಇನ್ನೂ ನಾನು ಇಲ್ಲಿಯೇ ಇದ್ದರೆ ಕೆಲಸ ಕೆಟ್ಟಿತು ಎನ್ನುತ್ತ ಆ ಕೆಲಸದ ಪಟ್ಟಿಯನ್ನು ದೀಪದ ಕೆಳಗೆ ಇಟ್ಟು ಮಾವನಿದ್ದಲ್ಲಿಗೇ ಓಡಿದ.

ಆಸ್ಪತ್ರೆಯಲ್ಲಿ ಇಂಜೆಕ್ಷನ್‌ಗಾಗಿ ಬಂದಿದ್ದ ಪ್ರಣತಿ ಎದುರಾಗಿ ತಾನು ಹನ್ನೆರಡರ ಮಗ್ಗಿ ಕಲಿತಾಯ್ತು ಎಂದಾಗ ಪ್ರಣವನೂ ಅಲ್ಲಾವುದ್ದೀನನ ಮೇಲಿನ ಭರವಸೆಯಿಂದ ತಾನೂ ಕಲಿತಾಯ್ತು ಎಂದನು. ಆಗ ಅವಳು 'ಹಾಗಾದರೆ ಹೇಳು ನೋಡೋಣ' ಎನ್ನಲು ಅಷ್ಟೊತ್ತಿಗೆ ಅವರಪ್ಪ ಅವಳನ್ನು ಒಳಗೆ ನರ್ಸ್ ಬಳಿಗೆ ಕರೆದೊಯ್ದರು. ಪ್ರಣವ ಬಹುದೊಡ್ಡ ಅಪಾಯದಿಂದ ಪಾರಾದ. ಇಂಜೆಕ್ಷನ್‌ಗೆ ಹೆದರಿ ಪ್ರಣತಿ ಅಳುತ್ತ ಹೊರಗೆ ಬಂದಾಗ ಹನ್ನೆರಡರ ಮಗ್ಗಿಯನ್ನು ಕೇಳುವುದು ಮರೆತು ಹೋಗಿತ್ತು. ಇದರಿಂದ ಧೈರ್ಯ ಹೊಂದಿದ ಪ್ರಣವ ಅವಳೆದುರು ತನಗೆ ಇಂಜೆಕ್ಷನ್ ಭಯವೇ ಇಲ್ಲ, ಅದಕ್ಕೆ ತಾನು ಅಳಲೇ ಇಲ್ಲ ಎಂದು ಬೀಗಿದ.

ಇತ್ತ ಮಾವ ಜೆಸಿಬಿ ಹುಡುಗನೊಂದಿಗೆ ಮಾತಾಡುತ್ತಿರುವುದು ಅವನಿಗೆ ಆಶ್ಚರ್ಯವಾಗಿ ಯಾಕಿರಬಹುದು ಎಂದು ಯೋಚಿಸತೊಡಗಿದ. ಅಷ್ಟರಲ್ಲೆ ಅಲ್ಲಾವುದ್ದೀನನ ನೆನಪಾಗಿ ಪುಳಕವಾಯಿತು. ಮಾವ, ಅಜ್ಜಿ, ಗುಲಾಬಿ, ನರ್ಸ್, ಪ್ರಣತಿ ಹೀಗೆ ಯಾರಿಗೂ ಗೊತ್ತಿರದ ರಹಸ್ಯವೊಂದು ತನ್ನ ಬಳಿ ಇದೆ ಎಂದು ಅವನಿಗೆ ಬಹಳ ಹೆಮ್ಮೆಯಾಯಿತು.

ಮಾವನ ಬಳಿಗೆ ಹೋಗಿ 'ಮಾವ ಬೇಗ ಮನೆಗೋಪ' ಎಂದು ಪೀಡಿಸತೊಡಗಿದ.

'ಪ್ಯಾಟೆ ಅಂದ್ರೆ ಜೀವ ಬಿಡ್ತಿದ್ದೆ ಇವತ್ಯಂತ ಆತ ಮಾಣಿ, ನಂಗಿನ್ನೂ ಸಲ್ಪ ಕೆಲ್ಸಿತ್ತಾ ಸುಮ್ನಾಯ್ಕೊ' ಎಂದು ಮಾವ ಗದರಿಸಿದ. ಇವನನ್ನು ಅಂಗಡಿ ಮುಂದೆ ನಿಲ್ಲಿಸಿ ಮಾವ ಪುರಾಣ ಹೊಡೆಯಲು ಶುರು ಮಾಡಿದ. ಪ್ರಣವನಿಗೆ ಹೊಟ್ಟೆಯೊಳಗೆ ಓತಿಕ್ಯಾತ ಓಡಾಡಿದಂತಾಯ್ತು. ಅಂಗಡಿಯವ ಇವನ ದುರವಸ್ಥೆಯನ್ನು ಕಂಡು ಕೊಟ್ಟ ಚಾಕ್ಲೇಟನ್ನು ತಿನ್ನಲೂ ಮನಸ್ಸಾಗದೇ ಜೇಬಿಗಿಳಿಸಿದ. ಅರ್ಧ ಗಂಟೆ ಅನಂತರ ಮಾವ ಇವನತ್ತ ತಿರುಗಿ 'ಇನ್ನು ಹೋಪ ಅಕಾ' ಎಂದಾಗ ಬೈಕಿನತ್ತ ಓಡಿದ ಪ್ರಣವ.

ಮನೆ ಹತ್ರ ಬರ್ತಾ ಇದ್ದಂತೆ ಪ್ರಣವನ ಕಾತರ ಹೆಚ್ಚುತ್ತ ಹೋಯಿತು. ಎದೆ ಡವಡವಗುಟ್ಟುತ್ತಿತ್ತು. ಮನೆ ಮುಟ್ಟಿದ ಕೂಡಲೇ ಬೈಕಿಂದ ಹಾರಿ ಒಂದೇ ಉಸಿರಿಗೆ ಮನೆಯ ಹಿಂದೆ ಓಡಿದವ ಅಲ್ಲೇ ಗಕ್ಕನೇ ನಿಂತುಬಿಟ್ಟ. ಆಸ್ಪತ್ರೆಯಲ್ಲಿ ಕಂಡಿದ್ದ ಜೆಸಿಬಿ ಹುಡುಗ ಅದರಲ್ಲಿ ಕುಳಿತು ದರೆಯನ್ನು ಅಗೆಯುತ್ತಿದ್ದ. ಇವನ ಆಟದ ಸೋಗೆಮನೆ ಅಷ್ಟರಲ್ಲಾಗಲೇ ಮುರಿದು ಬಿದ್ದಾಗಿತ್ತು. ಅದರ ಅವಶೇಷಗಳ ಮೇಲೆ ರೊಯ್ಯನೆ ಜೆಸಿಬಿ ಹಿಂದಕ್ಕೆ ಮುಂದಕ್ಕೆ ಚಲಿಸುತ್ತ ದರೆಯ ಮಣ್ಣನ್ನು ತೆಗೆಯುತ್ತಿತ್ತು. ಪ್ರಣವನ ಹಿಂದೆ ಬಂದ ಮಾವ 'ಮಾಣಿ ಮತ್ತಿನ್ನೊಂದು ಮನೆ ಕಟ್ಟುವ ಅಕಾ, ಇಲ್ಲಿ ಒಂದು ಕೊಟ್ಗೆ ಕಟ್ಸೊ, ನಿಂಗಿನ್ನು ಆಡುಕೆ ಲಾಯ್ಕಾತ್ತ್ ಕಾಣ್' ಎಂದಾಗ ಪ್ರಣವನಿಗೆ ಅಳುವೇ ಬಂದುಬಿಟ್ಟಿತು.



'ಇಷ್ಟಕ್ಕೆಲ್ಲ ಅಳುದನ ಮಾರಾಯ, ಸುಮ್ನಾಯ್ಕೊ ನಾನೇ ಒಂದ್ ಹೊಸಾ ಮನಿ ಕಟ್ಟಿಕೊಡ್ತೆ ಅಳೂಕಾಗ.. ' ಎಂದು ತಲೆ ನೇವರಿಸುತ್ತ ರಮಿಸಲು ತೊಡಗಿದಾಗ ಪ್ರಣವ ಅಲ್ಲಿಂದ ತಪ್ಪಿಸಿಕೊಂಡು ಜೆಸಿಬಿಯ ಬಳಿಗೋಡಿ ಆಕಾರ ಕಳೆದುಕೊಂಡಿದ್ದ ಬುಡ್ಡಿದೀಪಗಳ ಚೂರುಗಳನ್ನೆತ್ತಿಕೊಂಡು, ಎಲ್ಲೂ ನಿಲ್ಲದೇ ತೋಟದ ಮನೆ ಕಡೆಗೆ ಓಡುತ್ತ ಜೋರಾಗಿ ಅಳುತ್ತ ಹನ್ನೆರಡರ ಮಗ್ಗಿ ಹೇಳತೊಡಗಿದ.